ವಿಸ್ಮೃತಿಯ ರೋಗ, ಜೀವನದ ಸತ್ಯದರ್ಶನಗಳು ಹೇಳಲಾಗದ, ಹೇಳಬಾರದ ಸಂದಿಗ್ಧ ಅನುಭಾವಗಳು, ಇತಿಹಾಸದಲ್ಲಿ ಮೌನವಾಗಿಸಿದವರಿಗೆ ದನಿಯಾದವರು... ನನ್ನ ಕಥನದಲ್ಲಿ ಮತ್ತೆ ಮತ್ತೆ ಪರಿಶೋಧಕ್ಕೆ ಒಳಪಟ್ಟ ಸ್ಥಾಯಿ ಭಾವಗಳು ಎಂದು ಭಾವಿಸಿರುವೆ.

◆ **ನಿಮ್ಮ ಕತೆಗಳ ವಿಸ್ತಾರದ ಲಯದಲ್ಲಿ ವಾಸ್ತವಿಕತೆ ಮತ್ತು ಕಲ್ಪಕತೆಯ ಪಾತ್ರ ಎಂತಹದು?**

ಕತೆಯಲ್ಲಿ ವಾಸ್ತವಿಕತೆ ಮತ್ತು ಕಲ್ಪಕತೆ ಈಗಾಗಲೆ ಹಲವು ಸಂದರ್ಭಗಳಲ್ಲಿ ಚರ್ಚಿತವಾದ ವಿಷಯ. ಭಾಷೆಯಲ್ಲಿ ಗ್ರಹಿತವಾದ ಅನುಭವವೇ ವಾಸ್ತವ. ಪದಾರ್ಥ ಜಗತ್ತು ಅರಿವಿಗೆ ಬರುವುದು ಪದಗಳ ಮೂಲಕ ಅಥವ ಪರಮ ಪದವೇ ಆಗಿ. ಅಂದರೆ, ನಿರಾಕಾರ ಪ್ರಪಂಚ ನಮ್ಮ ಗ್ರಹಿಕೆಯ ಹೊರಗಿರಬಹುದು; ಆದರೆ, ಅದು ಅರಿವಿಗೆ ಬರುವುದು ಭಾಷೆಯಿಂದ. ಶಾಬ್ದಿಕ ಭಾಷೆಯ ಪರಿಚಯವೇ ಇಲ್ಲದ ಶಿಶುವಿನ ಗ್ರಹಿಕೆಯಲ್ಲಿ ನಾವು ನೋಡುವ ಜಗತ್ತು ಹೇಗೆ ಕಾಣಬಹುದು? ವ್ಯಕ್ತಿಯೊಬ್ಬ ಕಲಾವಿದನಾಗಿ ಪಾತ್ರವೊಂದನ್ನು ಅಭಿನಯಿಸಿದಾಗ ಅದು ವಾಸ್ತವವೊ ಕಲ್ಪಿತವೊ ಎಂಬ ಪ್ರಶ್ನೆ ಹಾದಿ ತಪ್ಪಿಸಬಹುದು. ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ ಏನೆಂದರೆ ಎಲ್ಲ ಪಾತ್ರಗಳು ನಟಿಸಿ ಕಟ್ಟಿದ ಅಥವ ಸೃಷ್ಟಿಸಿದ ಕಥಾನುಭವ ಯಾವ ಸ್ವರೂಪದ್ದು ಎಂದು. ಆದ್ದರಿಂದ, ಒಂದು ವೇಳೆ ರಾಮ ಕಲ್ಪಿತ ಪಾತ್ರವಾದರೂ ನಿರೂಪಿತ ಕತೆ ವಾಸ್ತವ. ರಾಮನ ಪಾತ್ರಕ್ಕಿಂತ ರಾಮಾಯಣ ದೊಡ್ಡದು ಎಂದನಿಸುವುದು ಈ ಕಾರಣಕ್ಕಾಗಿ. ಕತೆಯಲ್ಲಿ ನಡೆಯುವ ವಿಸ್ಮಯ ಏನೆಂದರೆ ಪಾತ್ರಗಳು ಹೋಲಿಕೆಯಲ್ಲಿ ನಿಜ ಜೀವನದ ವ್ಯಕ್ತಿಗಳಾಗಿರಬಹುದು; ಘಟನೆ ನಾವು ನೋಡಿದ್ದೇ ಇದ್ದಿರಬಹುದು; ಭೌತಿಕ ವಿವರಗಳು ಅವೇ ಪರಿಚಿತ ಸಂಗತಿಗಳಾಗಿರಬಹುದು; ಆದರೆ, ವ್ಯಾವಹಾರಿಕ ತರ್ಕವನ್ನು ಮುರಿಯುವ ಅವುಗಳ ಸಂಯೋಜನೆ ಕಲ್ಪಿತ; ಸಂಯೋಜಿತ ಕಲ್ಪಿತ ಕತೆ ಮರಳಿ ಜೀವನದ ಸತ್ಯವಾಗಿಬಿಡುತ್ತದೆ! ನಾವೆಲ್ಲ ವಾಸ್ತವವೆಂದು ನಂಬಿದ ದೃಗ್ಗೋಚರ ಪ್ರಪಂಚಕ್ಕಿಂತ ಕತೆ ಕಟ್ಟಿಕೊಡುವ ಜೀವ ಜಗತ್ತು ಹೆಚ್ಚು ಸತ್ಯವೆಂದು ನನಗನಿಸುತ್ತದೆ. ಯಾಕೆಂದರೆ, ಕಟ್ಟುವ ಕ್ರಿಯೆ ಮನುಷ್ಯನ ಆಂತರಿಕ ಸುಪ್ತ ಖಂಡ ಮತ್ತು ಬಾಹ್ಯ ಬ್ರಹ್ಮಾಂಡದ ನಡುವಿನ ಅಗೋಚರ ಸಂಬಂಧಗಳ ಸೂಕ್ಷ್ಮವೂ ಸಮಗ್ರವೂ ಸಂಕೀರ್ಣವೂ ಆದ ಐಕ್ಯ ರಚನೆಯನ್ನು ಹಲವು ಆಯಾಮಗಳಲ್ಲಿ ಚಿತ್ರಿಸುತ್ತದೆ. ಈ ಜಾದೂ ಜರಗುವುದು ಯಶಸ್ವಿ ನಿರೂಪಣೆಯಲ್ಲಿ. ಮಾರ್ಕ್ವೆಜ್ ಹೇಳುವಂತೆ ಕಥಾನುಭವವನ್ನು ನಿಜಗೊಳಿಸುವುದು ಕಲಾತ್ಮಕ ನಿರೂಪಣೆ.

◆ **ಕಲ್ಪಕತೆ–ವಾಸ್ತವಿಕತೆಯ ಪ್ರಶ್ನೆ ಇನ್ನಷ್ಟು ತೊಡಕಿನದಾಗೋದು ಚಾರಿತ್ರಿಕ ಕಾದಂಬರಿಯಲ್ಲಿ. ನಿಮ್ಮ 'ಮೃಗಶಿರ' ಕಾದಂಬರಿಯನ್ನು ಚಾರಿತ್ರಿಕ ಕಾದಂಬರಿಯಾಗಿ ಓದಿದರೆ ಈ ತೊಡಕು ಗೊತ್ತಾಗುತ್ತದೆ. ಇದ್ದದ್ದು ಇದ್ದ ಹಾಗೇ ಬರೆಯಬೇಕು ಅಂತ ಹೊರಟ ನಿರೂಪಕ–ಕತೆಗಾರನಿಗೆ ಇದ್ದದ್ದು ಏನು ಅಂತ ಕಡೆಗೂ ತಿಳಿಯುವುದಿಲ್ಲ. ಬದಲಾಗಿ ಹಲವು ನಿರೂಪಕರಿಂದ ಪಡೆದುಕೊಂಡ ಅವರವರ ಅನುಭವ ಕಥನಗಳು ಮಾತ್ರ ದೊರಕುತ್ತವೆ. ಸ್ವಾತಂತ್ರ್ಯ ಹೋರಾಟಗಾರನ ಬದುಕಿನ ಚಿತ್ರ ಕೊಡಲಿಕ್ಕೆ ಹೊರಟ ನಿರೂಪಕ ಹೋರಾಟದ ಚರಿತ್ರೆಯಲ್ಲಿ ಕಾಣಸಿಗಲಾರದ ಅಂತಕ್ಕ, ತಂಗುನಂತಹವರ ಯಾತನೆಯ ಕತೆ ದಾಖಲಿಸಿಬಿಟ್ಟಿರುತ್ತಾನೆ. 'ಅವನ' ಕತೆ ಆಗಲು ಹೊರಟಿದ್ದು 'ಅವಳ' ಕತೆ ಆಗುತ್ತದೆ. ಈ 'ಅವಳ ಕತೆ' ತನ್ನ ಇರುವಿಕೆಯಿಂದಲೇ 'ಅವನ ಕತೆ'ಯನ್ನು ಪ್ರಶ್ನಿಸುತ್ತದೆ. 'ಅವಳು' ಅಂದರೆ ಅಂತಕ್ಕ, ತುಂಗ ಮಾತ್ರ ಅಲ್ಲ. ಚರಿತ್ರೆಗೆ ಹೊರಗಿರುವ ಸಾಮಾನ್ಯರು. ಹೀಗಾಗಿ ಬಹುನಿರೂಪಕರ ಈ ಕಥನಗುಚ್ಛ ನಾವು ಸುರಳೀತವಾಗಿದೆ ಅಂದುಕೊಂಡ ಇತಿಹಾಸದ ಕಲ್ಪನೆಯನ್ನು**